ಕರುಗಳನ್ನು ರೈತರಿಗೆ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗಿದ್ದು ಈ ಮೂಲಕ ಸರ್ಕಾರಕ್ಕೆ ರೂ 76 58 ಲಕ್ಷಗಳ ಆದಾಯ ಬಂದಿರುತ್ತದೆ

ಆ) ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆಯ ಅಡಿಯಲ್ಲಿ ಪ್ರತಿ ಜಿಲ್ಲೆಗೆ ಸ್ಥಳೀಯ ಗೋತಗಳಿಗಳನ್ನು ಅಭಿವೃದ್ಧಿಪಡಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ಟ್ರಸ್ಟ್‌ಗಳಿಗೆ ರೂ 10 00 ಲಕ್ಷಗಳ ಸಹಾಯಾನುದಾನ ನೀಡುವ ಕಾರ್ಯಕ್ರಮವಿದ್ದು, ಪ್ರಸಕ್ತ ಸಾಲಿಗೆ ಸರ್ಕಾರ ಮಂಜೂರಾತಿ ನೀಡಿದೆ ಮತ್ತು ರೂ 270 00 ಲಕ್ಷಗಳ ಅನುದಾನ ಸಹ ನಿಗದಿಪಡಿಸಿದೆ

ಇ) ಈ ಯೋಜನೆ ಅಡಿ ಪ್ರತಿ ಜಿಲ್ಲೆಗೆ ರೂ 10 00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು ಪ್ರತಿ ಜಿಲ್ಲೆಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳು, ಜಿಲ್ಲಾಧಿಕಾರಿಗಳು/ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಪ್ರಾಣಿ ಹಿಂಸೆ ಪ್ರತಿಬಂಧಕ ಸಂಸ್ಥೆ ಮುಖಾಂತರ ಅರ್ಜಿ ಸಲ್ಲಿಸಿದಲ್ಲಿ, ಈ ಯೋಜನೆ ಮಂಜೂರಾತಿ ಆದೇಶದಲ್ಲಿನ ನಿಯಮಾನುಸಾರ ಸಹಾಯಾನುದಾನ ಬಿಡುಗಡೆ ಕ್ರಮಕೈಗೊಳ್ಳಲಾಗುತ್ತಿದೆ ಪ್ರತಿ ಜಿಲ್ಲೆಯಲ್ಲಿ ಗರಿಷ್ಠ ರೂ 10 00 ಲಕ್ಷಗಳ ಅನುದಾನ ಈ ಯೋಜನೆಯಡಿ ನೀಡಬಹುದಾಗಿದೆ

1062 (1293) ಶ್ರೀ ಕೆ ಎಂ ಕೃಷ್ಣಮೂರ್ತಿ (ಕಡೂರು). ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ರಾಮಚಂದ್ರಪುರ ಮರದಲ್ಲಿ ಭಾರತೀಯ ಗೋತಳಿಯನ್ನು ಅಭಿವೃದ್ಧಿಪಡಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಅಜ್ಜಂಪುರ ಮತ್ತು ಬೀರೂರು ಫಾರಂನಲ್ಲಿರುವ ಅಮೃತ್‌ಮಹಲ್ ತಳಿಗಳನ್ನು ಅಭಿವೃದ್ಧಿಪಡಿಸಲು ಯಾವುದೇ ಷರತ್ತಿಲ್ಲದೇ ಅವರ ಸ್ವಾಧೀನಕ್ಕೆ ವಹಿಸಲು ಕ್ರಮಕೈಗೊಳ್ಳಲಾಗುವುದೇ,

ಇ) ಸಾಧ್ಯವಿದ್ದಲ್ಲಿ, ಅಮೃತ್‌ಮಹಲ್ ಹಳ್ಳಿಕಾರ್, ದೇವದಾನಿ, ಕೃಷ್ಣ ಮಾಲೆತಳಿ ಮತ್ತು ಮಲೆನಾಡು ಗಿಡ್ಡ ತಳಿಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ

ಜಿಲ್ಲಾ ಪಂಚಾಯತ್‌ಗೆ 10 ಲಕ್ಷ ರೂ ನೀಡಿದ್ದು, ಇದನ್ನು ಮೇಲ್ಕಂಡ ಸ್ವಯಂಸೇವಾ ಸಂಸ್ಥೆಗೆ ವಹಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಈ ಕೇಂದ್ರಗಳಲ್ಲಿ ಅಮೃತ್‌ಮಹಲ್ ತಳಿ ಅಭಿವೃದ್ಧಿಗಾಗಿ ಉತ್ತಮ ತಳಿಯ ಆಯ್ದ ರಾಸುಗಳನ್ನು ಸಾಕಿ ತಳಿ ಅಭಿವೃದ್ಧಿಪಡಿಸುತ್ತಿದ್ದು, ಗಂಡು ಕರುಗಳನ್ನು ಬೀರೂರು ಕ್ಷೇತ್ರದಲ್ಲಿ ವೈಜ್ಞಾನಿಕವಾಗಿ ಸಾಕಿ ತಳಿ ಅಭಿವೃದ್ಧಿಗಾಗಿ ಸರಬರಾಜು ಮಾಡಲಾಗುತ್ತಿದೆ ಆದುದರಿಂದ ಯಾವುದೇ ಷರತ್ತಿಲ್ಲದೆ ಹಸ್ತಾಂತರಿಸುವುದು ಸಾಧ್ಯವಿರುವುದಿಲ್ಲ

ಇ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಹಮ್ಮಿಕೊಳ್ಳಲಾಗಿರುವ ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆ ಕಾರ್ಯಕ್ರಮದಡಿಯಲ್ಲಿ ಕರ್ನಾಟಕದ ಪ್ರಸಿದ್ಧ ಸ್ಥಳೀಯ ತಳಿಗಳಾದ ಹಳ್ಳಿಕಾರ್, ಅಮೃತ್‌ಮಹಲ್, ಖಿಲ್ಲಾರ್, ದೇವಣಿ ಮತ್ತು ಕೃಷ್ಣವ್ಯಾಲಿ ತಳಿಗಳನ್ನು ಸಂರಕ್ಷಣೆ ಮಾಡಲು ರೂ 270 00 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ ಈ ಯೋಜನೆಯಡಿಯಲ್ಲಿ 20 00 ಎಕರೆ ಜಮೀನು ಹೊಂದಿದ್ದು ಅಥವಾ ಲೀಸ್ ಪಡೆದು ಈಗಾಗಲೇ 100 ಸ್ಥಳೀಯ ರಾಸುಗಳ ತಳಿ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುತ್ತಿರುವ ಸಂಘಸಂಸ್ಥೆಗಳು/ ಟ್ರಸ್ಟ್‌ಗಳಿಗೆ ಮೂಲಭೂತ ಸೌಕರ್ಯಕ್ಕಾಗಿ ಗರಿಷ್ಟ 10 00 ಲಕ್ಷಗಳ ಮಿತಿಗೆ ಒಳಪಟ್ಟು ಸಹಾಯಾನುದಾನವನ್ನಾಗಿ ಪ್ರತಿ ಜಿಲ್ಲೆಗೆ 10 00 ಲಕ್ಷಗಳಂತೆ ನಿಗದಿಪಡಿಸಿದೆ ಈಗಾಗಲೇ - ಕಾರ್ಯಕ್ರಮವು ಸರ್ಕಾರದಿಂದ ಮಂಜೂರಾಗಿದ್ದು, ಪ್ರತಿ ಜಿಲ್ಲೆಯಿಂದ ಈ ರೀತಿ ಸ್ಥಳೀಯ ರಾಸುಗಳ ಅಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿರುವ ಸಂಘ ಸಂಸ್ಥೆಗಳನ್ನು ಗುರುತಿಸಿ ಮಾನ್ಯ ಜಿಲ್ಲಾಧಿಕಾರಿಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಜಿಲ್ಲಾ ಪ್ರಾಣಿ ಹಿಂಸಾಪ್ರತಿಬಂಧಕ ಸಂಸ್ಥೆಯಿಂದ ಶಿಫಾರಸ್ಸು ಮಾಡಿದ್ದಲ್ಲಿ ಅನುದಾನ ಬಿಡುಗಡೆ ಕ್ರಮವಹಿಸಲಾಗುತ್ತಿದೆ

ಮೇಲ್ಕಂಡ ಹೊಸನಗರ ಶ್ರೀರಾಮಚಂದ್ರಪುರ ಮಠದಿಂದ ನಡಸಲಾಗುತ್ತಿರುವ ಗೋತಳಿ ಸಂರಕ್ಷಣೆಗೆ ರೂ 10 00 ಲಕ್ಷಗಳ ಸಹಾಯಾನುದಾನ ಮಂಜೂರಾತಿಗಾಗಿ ಪ್ರಸ್ತಾವನೆಯು ಬಂದಿದ್ದು ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ

1064 (1237) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕಳೆದ 3 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು, ಯಾವ ಯಾವ ಯೋಜನೆಗಳಿಗೆ ಈ ಹಣವನ್ನು ಕೇಂದ್ರ ನೀಡಿದೆ,

ಆ) ಈ ಹಣವನ್ನು ಯಾವ ಯಾವ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ, (ವಿವರ ಒದಗಿಸುವುದು)

ಇ) ಈ ಹಣವನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಿಧಾನ ಸಭಾ ಕ್ಷೇತ್ರಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳೇನು (ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ಹಾಗೂ ಯೋಜನಾವಾರು ವಿವರಗಳು ಕೆಳಕಂಡಂತಿವೆ,

(ರೂ ಲಕ್ಷಗಳಲ್ಲಿ)

ಯೋಜನೆ	ವರ್ಷ			ಒಟ್ಟು
	2003–04	2004–05	2005–06	
1 ದೌರ್ಜನ್ಯದಲ್ಲಿ ನೊಂದ ಪರಿಶಿಷ್ಟಜಾತಿ/ ಪರಿಶಿಷ್ಟ ವರ್ಗಗಳ ಸಂತ್ರಸ್ಥರಿಗೆ ಪರಿಹಾರಧನ ಮಂಜೂರಾತಿ	–	150 00	242 00	392 00